ಗೂನುರ್ ಓರ್ವ ಬುದ್ಧಿವಂತ ಮತ್ತು ಹಿರಿಯ ವೈದ್ಯ. ಅವಳಿಗೊಬ್ಬ ಮಗ, ಅವನ ಹೆಸರು ಕೂಡಾ ಗೂನುರ್ (ಮಗ ಗೂನುರ್ ಎನ್ನಿ). ಅವನಿಗೆ ಇಬ್ಬರು ಹೆಂಡಿರು – ಗುಡಾ ಎಂಬ ಕೆಂಪು ಹಲ್ಲಿ ಮತ್ತು ಬೀರಿಯುನ್ ಎಂಬ ಮುಳ್ಳು ಮೈನ ಹಲ್ಲಿ. ಮೂವರೂ ಸರಿಯಾಗಿಯೇ ಸಂಸಾರ ಮಾಡಿಕೊಂಡು ಇದ್ದರು. ಗೂನುರ್ ಸಾಕಷ್ಟು ತಾಳ್ಮೆಯಿದ್ದು ನೆಮ್ಮದಿಯಿಂದಲೇ ಇದ್ದ. ಆದರೆ ಒಂದು ದಿನ ಅವನ ಹೆಂಡಿರು ವಿನಾ ಕಾರಣ ಅವನೊಡನೆ ಜಗಳಕ್ಕಿಳಿದರು. ಮಾತಿಗೆ ಮಾತು ಬೆಳೆಯಿತು. ಸಹಿಸಿಕೊಳ್ಳುವವರೆಗೂ ಸುಮ್ಮನಿದ್ದ. ಆದರೆ ಮಾತು ಮಿತಿ ಮೀರಿತು. ಕುಪಿತನಾಗಿ ಆತ ಗುಡಾ ಮತ್ತು ಬೀರಿಯನ್ ಇಬ್ಬರಿಗೂ ಚೆನ್ನಾಗಿ ಬಾರಿಸಿದ. ತಡೆಯಲಾರದೆ ಅವರಿಬ್ಬರೂ ಮನೆಯಿಂದ ಹೊರಬಂದರು.

"ಇವನ ಕಾಟ ಏಕೋ ಹೆಚ್ಚಾಯಿತು. ಈ ತರಹ ಬಾಳುವುದು ಕಷ್ಟ. ಏನಾದರೂ ಮಾಡಬೇಕು" ಅಂದುಕೊಂಡರು. ಏನು ಮಾಡುವುದು? ಯೋಚಿಸಿ ನೋಡಿದರು. ಅವರಿಗೆ ಹೊಳೆದದ್ದು ಒಂದೇ ಉತ್ತರ – "ಅವನನ್ನು ಸಾಯಿಸಬೇಕು". ಹೇಗೆ ಎಂದು ಚರ್ಚಿಸಿದರು. ಉಪಾಯ ಹೊಳೆಯಲಿಲ್ಲ. ಅವರು ಮುಂದೆ ಹೋಗುತ್ತಿದ್ದಂತೆ ಒಂದು ಚಿಕ್ಕ ನದಿ ಕಾಣಿಸಿತು. ಪಕ್ಕದಲ್ಲಿ ಮರಳು. ಈಗ ಏನೋ ಹೊಳೆದಂತೆ ಆಯಿತು. ಕೂಡಲೇ ಮರಳಿನಲ್ಲಿ ಒಂದು ಗುಂಡಿ ತೋಡಿ ನೀರು ತುಂಬಿದರು. ಅದರ ಮೇಲೆ ಅಲ್ಲಿಯೇ ಸಿಕ್ಕ ಕಡ್ಡಿಗಳು, ಎಲೆ ಮತ್ತು ಹುಲ್ಲು ಎಲ್ಲವನ್ನೂ ಇರಿಸಿದರು.

"ಅವನಿಗೆ ಈಗ ಇಲ್ಲೊಂದು ಭಾರಿ ಇಲಿ ಬಿಲ ಇದೆ ಅಂತ ಹೇಳೋಣ" ಅಂದುಕೊಂಡು ತಮ್ಮ ಗೂಡಿಗೆ ಬಂದರು. ಗೂನುರ್ ಅಲ್ಲಿಯೇ ಇದ್ದ.

"ಗೂನುರ್, ಗೂನುರ್, ನಾವು ದಾರಿಯಲ್ಲಿ ಹೋಗುತ್ತಾ ಇದ್ದಾಗ ಒಂದು ದೊಡ್ಡ ಇಲಿಬಿಲವನ್ನು ನೋಡಿದೆವು. ಅದರಲ್ಲಿ ಇಲಿ ವಿವಿಧ ಬೇಟೆಗಳನ್ನು ಕೂಡಿಸಿ ಇಟ್ಟಿರುವುದು ಖಂಡಿತ. ನೀನು ಒಂದು ಬಾರಿ ಅದರತ್ತ ಹೋದರೆ ನಿನಗೆ ಸುಗ್ಗಿ ತಪ್ಪಿದ್ದಲ್ಲ." ಎಂದು ವಿವರಿಸಿ ಹೇಳಿದರು. ಕೇಳಿ ಆನಂದವಾಯಿತು ಗೂನುರನಿಗೆ. ತಕ್ಷಣ ಹೆಂಡಿರು ಹೇಳಿದತ್ತ ಧಾವಿಸಿದ. ಅವರಿಬ್ಬರೂ ದೂರದಲ್ಲಿಯೇ ನಿಂತು ನೋಡುತ್ತಿದ್ದರು. ಗೂನುರ್ 'ಬಿಲ'ದತ್ತ ಬಂದವನೇ ಅದರ ಮೇಲಕ್ಕೆ ಚಂಗ್ ಎಂದು ಹಾರಿದ. ಒಮ್ಮೆಗೇ ಕಡ್ಡಿ, ಎಲೆ ಎಲ್ಲವೂ ಪಕ್ಕ ಸರಿದು, ಅವನು ನೀರಿನೊಳಗೆ ಬಿದ್ದುಬಿಟ್ಟ. ಹೆಂಡಿರು ಮಾಡಿದ ಮೋಸದ ಅರಿವಾಯಿತು ಅವನಿಗೆ. ಆದರೆ ಅವನು ಏನನ್ನೂ ಮಾಡಲಾರದೇ ಮುಳುಗಿಹೋದ. ಇದನ್ನು ನೋಡಿದ ಅವನ ಹೆಂಡಿರ ಆನಂದಕ್ಕೆ ಪಾರವೇ ಇಲ್ಲ. "ಗೆದ್ದೆವು ನಾವು, ಅವನು ಇನ್ನು ಹೊರಬರಲಾರ. ಇನ್ನು ಸುಖವಾಗಿ ಇರಬಹುದು" ಎಂದು ತಮ್ಮ ಗೂಡಿನತ್ತ ನಡೆದರು.

